ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 4 ಎಲ್‌ಜಿಡಬ್ಲ್ಯೂ 92

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 27-5-92.

## ಸುತ್ತೋಲೆ

ವಿಷಯ: ಭೂಪರಿವರ್ತನಾ ಪ್ರಗತಿ ಅನುಸೂಚಿ ಬಗ್ಗೆ.

---

ಭೂಪರಿವರ್ತನಾ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ವಿಧಿ 95(5)ರ ಪ್ರಕಾರ, ಭೂಪರಿವರ್ತನೆ ಕೋರಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ತಾರೀಖಿನಿಂದ ನಾಲ್ಕು ತಿಂಗಳಲ್ಲಿ ಜಿಲ್ಲಾಧಿಕಾರಿಗಳು ತಮ್ಮ ತೀರ್ಮಾನವನ್ನು ಸೂಚಿಸಲು ತಪ್ಪಿದಲ್ಲಿ, ಬೇಡಲಾಗಿದ್ದ ಅನುಮತಿಯನ್ನು ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು ಎಂದಿರುತ್ತದೆ. ಅಂದರೆ, ಕಾನೂನು ಬದ್ಧ ನಾಲ್ಕು ತಿಂಗಳ ಅವಧಿಯೊಳಗೆ ಭೂ ಪರಿವರ್ತನೆಯ ಕೋರಿಕೆಯ ಮೇಲೆ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಂಡು ಆ ತೀರ್ಮಾನವನ್ನು ಕಾನೂನು ಬದ್ಧ ನಾಲ್ಕು ತಿಂಗಳ ಅವಧಿ ಮುಗಿಯುವ ಮುನ್ನವೇ ಅರ್ಜಿದಾರರಿಗೆ ತಿಳಿಸಬೇಕು ಹಾಗೂ ಹಾಗೆ ತಿಳಿಸಿದ್ದಕ್ಕೆ ಸಂಬಂಧಪಟ್ಟ ಕಡತದಲ್ಲಿ ಸಾಕ್ಷ್ಯಾಧಾರಗಳನ್ನು ಒದಗಿಸಿಟ್ಟಿರಬೇಕು. ಆದರೆ, ಅನೇಕ ಪ್ರಕರಣಗಳಲ್ಲಿ ಆಡಳಿತಾತ್ಮಕ ಅಡಚಣೆಗಳಿಂದಲೋ ಅಥವಾ ದುರುದ್ದೇಶ ಪೂರ್ವಕವಾಗಿಯೋ, ಕಾನೂನು ಬದ್ಧ (statutory) ನಾಲ್ಕು ತಿಂಗಳೊಳಗೆ ಭೂ ಪರಿವರ್ತನಾ ಕೋರಿಕೆಯ ಮೇಲೆ ತೀರ್ಮಾನ ತೆಗೆದುಕೊಳ್ಳದೇ ಇರುವ ಪ್ರಯುಕ್ತ, ಭಾವಿತ ಭೂಪರಿವರ್ತನೆ ಅನುಮತಿ ಪಡೆಯಲಾಗಿರುತ್ತದೆ. ಇಂತಹ ಸನ್ನಿವೇಶಗಳಿಗೆ ಅವಕಾಶ ಮಾಡಿಕೊಟ್ಟ ಬೇಜವಾಬ್ದಾರಿ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುತ್ತದೆ.

ಕೆಲವು ಪ್ರಕರಣಗಳಲ್ಲಿ ಭೂ ಪರಿವರ್ತನಾ ಶುಲ್ಕವನ್ನು ಕಾನೂನು ಅನುಸರಿಸಿ ವಿಧಿಸದೆ ಕಡಿಮೆ ದರದಲ್ಲಿ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಪ್ರಕರಣಗಳಲ್ಲೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಆದುದರಿಂದ ಎಲ್ಲಾ ವಿಭಾಗಾಧಿಕಾರಿಗಳು ಅವರು ಸಹಾಯಕ ಕಮೀಷನರರವರ ಕಛೇರಿಗಳಿಗೆ ಅಥವಾ ಜಿಲ್ಲಾಧಿಕಾರಿಗಳ ಕಛೇರಿಗಳಿಗೆ ಭೇಟಿ ನೀಡಿದ ಸಮಯದಲ್ಲಿ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭೂಪರಿವರ್ತನಾ ಪ್ರಕರಣಗಳನ್ನು ಕಾನೂನಿನನ್ವಯ ವಿಲೆಮಾಡಲಾಗುತ್ತಿದೆಯೋ ಎಂಬ ಬಗ್ಗೆ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ಮತ್ತು ನಿರ್ದೇಶನಗಳನ್ನು ನೀಡಲು ತಿಳಿಸಿದೆ. ವಿಭಾಗೀಯ ಮಟ್ಟದಲ್ಲಿ ನಡೆಯುವ ಜಿಲ್ಲಾಧಿಕಾರಿಗಳ ಸಭೆಗಳಲ್ಲಿ ಈ ವಿಷಯವನ್ನು ಸಭೆಯ ಕಾರ್ಯಕ್ರಮದ ಪಟ್ಟಿಯಲ್ಲಿ (Agenda) ಸೇರಿಸಿಕೊಂಡು ವಿಭಾಗಾಧಿಕಾರಿಗಳು ಈ ವಿಷಯದ ಬಗ್ಗೆ ಪ್ರಗತಿ ಪರಿಶೀಲನೆ ಮಾಡಲು ಸಹ ತಿಳಿಸಿದೆ.

ಈ ದಿಸೆಯಲ್ಲಿ ವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳಿಂದ ಪ್ರತಿ ತಿಂಗಳು ನಿಯತ ಕಾಲಿಕವನ್ನು ರೂಪಿಸಿ ಮಾಹಿತಿ ತರಿಸಿ, ಈ ಸುತ್ತೋಲೆಗೆ ಲಗತ್ತಿಸಿರುವ ಅನುಸೂಚಿಯಲ್ಲಿ

.... 2

ಸರ್ಕಾರಕ್ಕೆ ಪ್ರತಿ ತಿಂಗಳು 10ನೇ ತಾರೀಖಿನೊಳಗೆ ತಪ್ಪದೇ ವರದಿಯನ್ನು ಕಳುಹಿಸಿ ಕೊಡಲು ನಿರ್ದೇಶಿಸಿದೆ.

ಸಹಿ:
(ಎನ್.ಚೌಡಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ.

1) ವಿಭಾಗಾಧಿಕಾರಿಗಳು, ಬೆಂಗಳೂರು:ಮೈಸೂರು:ಬೆಳಗಾಂ : ಗುಲ್ಬರ್ಗಾ,
2) ಜಿಲ್ಲಾಧಿಕಾರಿಗಳು: ಬೆಂಗಳೂರು:ಕೋಲಾರ:ತುಮಕೂರು:ಚಿತ್ರದುರ್ಗ:ಶಿವಮೊಗ್ಗ:
ಮೈಸೂರು:ಮಂಡ್ಯ:ಹಾಸನ:ಚಿಕ್ಕಮಗಳೂರು:ದಕ್ಷಿಣ ಕನ್ನಡ:
ಕೊಡಗು:ಬೆಳಗಾಂ:ಬಿಜಾಪುರ:ಧಾರವಾಡ:ಉತ್ತರ ಕನ್ನಡ:
ಗುಲ್ಬರ್ಗಾ:ರಾಯಚೂರು:ಬಳ್ಳಾರಿ:ಬೀದರ್ ಜಿಲ್ಲೆ.

ಪ್ರತಿ:-

(ಜಿತೇಂದ್ರ ಸಿಂಗ್)
ಸರ್ಕಾರದ ಅಧೀನಕಾರ್ಯದರ್ಶಿ,
ಕಂದಾಯಇಲಾಖೆ.

ವಿಅ265